ಡೈಸ್ಪೋರಾ ಇತ್ತು; ಬಹುತೇಕ ಇಂಡಿಯನ್ ಡೈಸ್ಪೋರಾಗಳಿದ್ದವು: ತೆಲುಗು ಅಸೋಸಿಯೇಶನ್, ಮರಾಠಿ ಅಸೋಸಿಯೇಶನ್, ಬಂಗಾಳಿ, ಮಲೆಯಾಳಿ, ಗುಜರಾತಿ ಅಸೋಸಿಯೇಶನ್‌ಗಳಿದ್ದವು...

ಇಷ್ಟು ಚಿಕ್ಕ ದೇಶದಲ್ಲಿ ಭಾರತೀಯರ ಇಷ್ಟೊಂದು ಸಮೂಹ... ಬೇರೆಬೇರೆ ರಾಜ್ಯಗಳ ಪರಂಪರೆಗಳನ್ನು ನೋಡಿ ಹಿತವೆನಿಸುತ್ತಿತ್ತು, ದುಃಖವೂ ಆಗುತ್ತಿತ್ತು. ಭಾರತ ಹೊರಗೂ ತುಂಡುಗಳಲ್ಲಿ ಹಂಚಿದೆಯೇ? ಒಂದು ಕಡೆ ಯುಗಾದಿ, ಇನ್ನೊಂದು ಕಡೆ ಪೊಂಗಲ್ ಫೆಸ್ಟಿವಲ್, ಮಗುದೊಂದು ಕಡೆ ಗಣೇಶ ಚತುರ್ಥಿ, ಬೇರೊಂದು ಕಡೆ ದುರ್ಗಾ–ನವರಾತ್ರಿಯನ್ನು ಆಚರಿಸಲಾಗುತ್ತಿದೆ. ನಾನು ಭಾರತೀಯ ಹಬ್ಬಗಳಲ್ಲಿ ಭಾಗವಹಿಸಲು ಬಯಸುತ್ತಿದ್ದೆ. ಇಲ್ಲಿ ನೆಲೆಸಿರುವ ಭಾರತೀಯ ಸಮುದಾಯಗಳ ಭಾಗವಾಗಲು ಬಯಸುತ್ತಿದ್ದೆ. ಆದರೆ ನನ್ನ ಪತಿ ಲಾರ್ಸ್ ಇವುಗಳನ್ನು ಜಾತಿ ಸಂಘಟನೆ ಎಂದ; ನನ್ನ ಜೊತೆಗೆ ಈ ಕಾರ್ಯಕ್ರಮಗಳಿಗೆ ಬರಲು ನಿರಾಕರಿಸಿದ. ನಾನು ಲಾರ್ಸ್‌ಗೆ, 'ಈ ಸಂಸ್ಥೆಗಳು ಸ್ವಾದಿಷ್ಟ ಭೋಜನ, ಸಮೃದ್ಧ ಸಂಸ್ಕೃತಿ, ಸಂಗೀತ, ಅಧ್ಯಾತ್ಮ, ಯೋಗವನ್ನು ಕೊಡುತ್ತವೆ, ನೀವು ಇದರಿಂದ ಬಹಳಷ್ಟು ಕಲಿಯುವಿರಿ' ಎಂದೆ. ಅವನ ಮೊದಲ ಮತ್ತು ಕೊನೆಯ ಉತ್ತರ 'ಇಲ್ಲ' ಎಂದಾಗಿತ್ತು. ಇದರಿಂದಾಗಿ ಡೆನ್ಮಾರ್ಕ್‌ನಲ್ಲಿ ನೆಲೆಸಿದ ಪ್ರವಾಸಿ ಭಾರತೀಯರೊಂದಿಗೆ ನನ್ನ ಮಿತ್ರತ್ವ ಬೆಳೆಯಲಿಲ್ಲ.

ಆಫ್ರಿಕಾದ ವಿಷಯ ಬೇರೆಯದಾಗಿತ್ತು, ಅಲ್ಲಿ ನನ್ನ ಸುತ್ತಮುತ್ತಲಿನ ಪರಿಸರ ಭಾರತೀಯ ಪರಿಸರದಂತಿತ್ತು, ನನ್ನ ಪತಿ ಭಾರತೀಯನಾಗಿದ್ದ. ಇಲ್ಲಿ ನನ್ನ ಪತಿ ಡ್ಯಾನಿಶ್ ಆಗಿದ್ದ. ಮೂರ್ನಾಲ್ಕು ಭಾರತೀಯರೊಂದಿಗೆ ನನ್ನ ಗೆಳೆತನವಾಯಿತು ಅಷ್ಟೆ. ಆದರೆ ಭಾರತೀಯ ಸಂಘಟನೆಗಳೊಂದಿಗೆ ನಾನು ಸದಾ ದೂರವಿದ್ದೆ.

ಇಲ್ಲಿ ಜೋಶ್‌ನನ್ನು ಒಂದು ಇಂಟರ್‌ನ್ಯಾಷನಲ್ ಶಾಲೆಗೆ ದಾಖಲಿಸಲಾಯಿತು. ಒಮ್ಮೊಮ್ಮೆ ನನಗೆ, ನನ್ನ ಸಮೀಪದಲ್ಲಿ ಅಲೋವೆರಾ ಮತ್ತು ಜೋಶ್ ಇದ್ದಾಗ ಯಾರ ಅಗತ್ಯವೂ ನನಗಿಲ್ಲ ಎಂದು ಅನ್ನಿಸುತ್ತಿತ್ತು. ಸದ್ಯ, ನಾನು ಜೋಶ್‌ನನ್ನು ಯೂರೋಪಿಗೆ ಕರೆತಂದೆ, ಒಂದು ಅಭಿವೃದ್ಧಿಶೀಲ ಮತ್ತು ಸಭ್ಯ ದೇಶಕ್ಕೆ ಬಂದೆ, ಇಲ್ಲಿ ಜೋಶ್‌ನ ಪಾಲನೆ ಪೋಷಣೆ ಉತ್ತಮ ರೀತಿಯಲ್ಲಿ ಆಗುವುದು. ಇಲ್ಲಿ ಅವನು ಬೆಳೆಯಲು ಉತ್ತಮ ಅವಕಾಶಗಳು ಲಭಿಸುತ್ತವೆ. ಒಟ್ಟಿನಲ್ಲಿ ನನಗೆ ನನ್ನ ಎರಡನೆಯ ವಿವಾಹ ನನ್ನ ಜೀವನದ ಒಂದು ಉತ್ತಮ ತೀರ್ಮಾನವಾಗಿತ್ತು ಎಂದು ಅನ್ನಿಸುತ್ತಿತ್ತು. ಒಂದು ಹೊಸ ವಾತಾವರಣ, ಹೊಸ ಸಂಬಂಧಗಳನ್ನು ಅರಿಯುವುದು ಹೊಸ ಅನುಭವವಾಗಿತ್ತು. ಪ್ರತಿಯೊಂದು ದಿನ ಸಹ ಖುಷಿಯ ದಿನವಾಗಿತ್ತು. ಡೆನ್ಮಾರ್ಕ್‌ನ ಜನ ಸಾಮಾನ್ಯವಾಗಿ ಶಿಸ್ತು ಮತ್ತು ಕಾನೂನುಗಳನ್ನು ಪಾಲಿಸುತ್ತಾರೆ. ಅವರು ತಮ್ಮ ಖಾಸಗಿತನಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಆದರೆ ಅವರೆಡೆಗೆ ಗೆಳೆತನದ ಕೈಯನ್ನು ಚಾಚಿದಾಗ ಅವರು ಉತ್ತಮ ಪ್ರತಿಕ್ರಿಯೆಯನ್ನೂ ತೋರುತ್ತಾರೆ.

## ಕಳೆದ ಸಂಚಿಕೆಯಲ್ಲಿ



ಒಡಹುಟ್ಟಿದ ನೀಲ್‌ನ ತೀವ್ರ ಅನಾರೋಗ್ಯದ ಕಾರಣದಿಂದಾಗಿ ನ್ಯಾನ್ಸಿ ಮತ್ತೆ ಮಲಪ್ಪುರಮ್‌ಗೆ ಬರಬೇಕಾಯಿತು. ಸಂಕಷ್ಟದ ಕ್ಷಣಗಳಲ್ಲಿ ಒತ್ತಾಸೆಯಾಗಿ ನಿಲ್ಲುತ್ತಿದ್ದ ಸಹೋದರ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದ. ಸಾವಿನ ಸಮ್ಮುಖದಲ್ಲೂ 'ಜೀವನ ಚಿಕ್ಕದು, ನಾಳೆಗೆ ಎಂದೂ ಮುಂದೂಡಬೇಡ' ಎನ್ನುವ ಮಾತನ್ನು ನ್ಯಾನ್ಸಿಗೆ ಬರೆದು ತಿಳಿಸಿದ. ನೀಲ್‌ನನ್ನು ಕಳಕೊಂಡ ನ್ಯಾನ್ಸಿ ಅಪಾರ ನೋವಿನೊಂದಿಗೆ ಮತ್ತೆ ಕೀನ್ಯಾಕ್ಕೆ ಮರಳಿದಳು. ಸಹೋದರನ ಮಾತು ಜೀವನವನ್ನು ಹೊಸ ಕಣ್ಣುಗಳೊಂದಿಗೆ ನೋಡಲು ಅವಳನ್ನು ಒತ್ತಾಯಿಸುತ್ತಿತ್ತು. ಅವಳ ವೇಷಭೂಷಣ ಬದಲಾಯಿತು. ಅದೇ ಸಮಯದಲ್ಲಿ ಕೀನ್ಯಾಕ್ಕೆ ಪ್ರವಾಸ ಬಂದಿದ್ದ ಲಾರ್ಸ್‌ನ ಸ್ನೇಹವಾಯಿತು. ಸ್ನೇಹ ಪ್ರೇಮವಾಗಿ ಬದಲಾಗಲಿಕ್ಕೆ ಹೆಚ್ಚಿನ ಸಮಯ ಬೇಕಾಗಲಿಲ್ಲ. ಅಬ್ರಾಹಮ್ ಜೊತೆಗಿನ ಬದುಕು ಕೊನೆಗೊಳಿಸಲು ಹೊಸ ಗೆಳೆತನ ಇಂಬು ನೀಡಿತು. ಜೀವನಚಕ್ರದ ಮತ್ತೊಂದು ಉರುಳುವಿಕೆ ಮೋಹಕವಾಗಿ ಕಾಣಿಸತೊಡಗಿತು.

ಲಾರ್ಸ್‌ನ ತಂದೆ–ತಾಯಿಯ ವಿವಾಹ ವಿಚ್ಛೇದನವಾಗಿತ್ತು. ಇಬ್ಬರೂ ಬೇರೆ ಬೇರೆಯಾಗಿ ಒಂಟಿಯಾಗಿದ್ದರು. ಇಬ್ಬರಲ್ಲಿ ಯಾರೂ ಮತ್ತೆ ಮದುವೆಯನ್ನು ಮಾಡಿಕೊಂಡಿರಲಿಲ್ಲ. ಅವರಿಗೆ ಲಾರ್ಸ್ ಒಬ್ಬನೇ ಪುತ್ರನಾಗಿದ್ದ. ಅವನು ಪ್ರಾರಂಭದಲ್ಲಿ ನನ್ನ ಬಳಿ ಸಾಕಷ್ಟು ಬಿಡುವಿನಲ್ಲಿರುತ್ತಿದ್ದ. ಜೋಶ್ ಶಾಲೆಗೆ ಹೋಗುವುದು ಮತ್ತು ಲಾರ್ಸ್ ತನ್ನ ಕಚೇರಿಯ ಕೆಲಸದಲ್ಲಿ ತೊಡಗಿದಾಗ, ನಾನು ಹೊರಗಿನ ಸ್ವಚ್ಛ ಗಾಳಿಯಲ್ಲಿ ದೂರದೂರಕ್ಕೆ ಅಡ್ಡಾಡಲು ಹೋಗುತ್ತಿದ್ದೆ.

***

ಜುಲೈ ಆರಂಭವಾಗಿತ್ತು. ಚಳಿ ಕಣ್ಮರೆಯಾಗಿ, ವಾತಾವರಣದಲ್ಲಿ ಕೋಮಲ ಬಿಸಿ ಗಾಳಿ ಬೀಸಲಾರಂಭಿಸಿತ್ತು. ಸೂರ್ಯನ ಬಿಸಿಲು ತನ್ನ ಚರಮಾವಸ್ಥೆಯಲ್ಲಿತ್ತು. ಸೂರ್ಯೋದಯದಿಂದ ಸೂರ್ಯಾಸ್ತದ ನಡುವಿನ ಸಮಯ ತುಂಬಾ ದೀರ್ಘವಾಗಿತ್ತು. ಅದೊಂದು ದಿನ ಬೆಳಗ್ಗೆ ನಾನು ಮನೆಯಿಂದ ಹೊರಟೆ. ಸ್ವಚ್ಛ ಗಾಳಿ ಹಿತವೆನಿಸುತ್ತಿತ್ತು. ಲಾರ್ಸ್‌ನ ತಾಯಿ ನಮ್ಮ ಮನೆಯಿಂದ ಹತ್ತು ನಿಮಿಷದ ಕಾಲ್ನಡಿಗೆಯ ದೂರದಲ್ಲಿ, ರೋವಿನ್ಸ್ಲೋಗೇಡ್ ಎಂಬ ಬೀದಿಯಲ್ಲಿರುವ ಮನೆಯಲ್ಲಿ ವಾಸಿಸುತ್ತಿದ್ದ ವಿಷಯವನ್ನು ಕೇಳಿದ್ದೆ. ನನ್ನ ವಿವಾಹವಾಗಿ ಒಂದೂವರೆ ತಿಂಗಳು ಕಳೆದಿತ್ತು. ವಿವಾಹದ ರಿಸೆಪ್ಷನ್‌ನಲ್ಲಿ ಮಾವನ ಮನೆಯವರೊಂದಿಗೆ ಭೇಟಿಯಾಗಿತ್ತು. ನಂತರ ಯಾರೊಂದಿಗೂ ಭೇಟಿಯಾಗಲಿ, ಮಾತುಕತೆಯಾಗಲಿ ನಡೆದಿರಲಿಲ್ಲ. ನನ್ನ ಮಾವನವರ ಪರಿವಾರ ಇಲ್ಲಿದೆ ಎಂದು ಅನ್ನಿಸುತ್ತಲೇ ಇರಲಿಲ್ಲ.

'ಲಾರ್ಸ್, ನಿಮ್ಮ ಪರಿವಾರದವರು ಎಲ್ಲಿದ್ದಾರೆ? ಅವರು ಯಾರೂ ಕಾಣಿಸುವುದಿಲ್ಲವಲ್ಲ...' ಎಂದು ಲಾರ್ಸ್‌ನನ್ನು ಕೇಳಿದೆ.

'ಕಮಿಲಾಳ ಆರೋಗ್ಯ ಸರಿಯಿಲ್ಲವಲ್ಲ... ಎಲ್ಲರ ಗಮನ ಅವಳ ಕಡೆಗಿದೆ' ಎಂದ ಲಾರ್ಸ್.

ನಾನು ಉತ್ಸುಕಳಾದೆ. ನನಗೆ ಕಮಿಲಾ ಬಗ್ಗೆ ಏನೇನೂ ತಿಳಿದಿರಲಿಲ್ಲ, ಅವರು ಲಾರ್ಸ್‌ನ ಮಮ್ಮಿ, ಅವರ ಆರೋಗ್ಯ ತುಂಬಾ ಹದಗೆಟ್ಟಿದೆ ಎಂದಷ್ಟೇ ತಿಳಿದಿತ್ತು. ನಮ್ಮ ಮದುವೆಯ ರಿಸೆಪ್ಷನ್‌ಗೆ ಮಾವನವರು ಮಾತ್ರ ಬಂದಿದ್ದರು. ಅವರ ಹೆಂಡತಿ ಕಮಿಲಾ ಆಸ್ಪತ್ರೆಗೆ ದಾಖಲಾಗಿದ್ದರು. ಲಾರ್ಸ್‌ನ ತಾಯಿಯನ್ನು ಭೇಟಿಯಾಗಲು ಯೋಚಿಸಿದೆ. ಅವರ ಮನೆಯ ವಿಳಾಸವನ್ನು ಲಾರ್ಸ್‌ನಿಂದ ಪಡೆದಿದ್ದೆ.

ಮೂರ್ನಾಲ್ಕು ಜನರನ್ನು, 'ರೋವಿನ್ಸ್ಲೋಗೇಡ್, ನಂಬರ್ 42 ಎಲ್ಲಿದೆ?' ಎಂದು ವಿಚಾರಿಸಿದೆ.

ಬಹು ಸುಲಭವಾಗಿ ಮನೆ ಸಿಕ್ಕಿತು. ಹೊರಗಿನ ಬಿಲ್ಡಿಂಗ್‌ನಲ್ಲಿ ಹಾಕಲಾಗಿದ್ದ ನೇಮ್‌ಪ್ಲೇಟಿನಲ್ಲಿ ಲಾರ್ಸ್‌ನ ತಾಯಿಯ ಹೆಸರು 'ಲಾರಾ ಹೈನಸನ್' ಎಂದಿತ್ತು. ಅವರು ಮೂರನೆಯ ಅಂತಸ್ತಿನಲ್ಲಿ ಎಡಗಡೆಗಿದ್ದ ಫ್ಲಾಟ್‌ನಲ್ಲಿ ವಾಸಿಸುತ್ತಿದ್ದರು. ನಾನು ಕೆಳಗೆ ನಿಂತು ಕಾಲಿಂಗ್ ಬೆಲ್ ಒತ್ತಿದೆ.

'ಯಾರು?' ಇಂಟರ್‌ಕಾಮ್‌ನಲ್ಲಿ ಅವರ ಧ್ವನಿ ಕೇಳಿಸಿತು.

'ನಾನು ನ್ಯಾನ್ಸಿ...'

ಮೌನ... ನನ್ನನ್ನು ಭೇಟಿಯಾಗುವ ಇಚ್ಛೆ ಅವರಿಗಿಲ್ಲ ಎಂದು ಅನ್ನಿಸಿತು. ಆದರೆ ಕೆಲವು ಕ್ಷಣಗಳ ನಂತರ ಬಿಲ್ಡಿಂಗ್‌ನ ಮುಖ್ಯ ದ್ವಾರ ತೆರೆದುಕೊಂಡಿತು. ಎಲಿವೇಟರ್ ಇರಲಿಲ್ಲ, ನಾನು ಮೆಟ್ಟಿಲುಗಳನ್ನು ಹತ್ತಲಾರಂಭಿಸಿದೆ. ಮೂರನೆಯ ಅಂತಸ್ತಿಗೆ ಹೋಗಿ ಅವರ ಫ್ಲಾಟಿನ ಕಾಲಿಂಗ್ ಬೆಲ್ ಒತ್ತಿದೆ. ಅವರು ಬಾಗಿಲನ್ನು ತೆರೆದರು. ಅವರು ಕಪ್ಪನೆಯ ಲೆಗಿಂಗ್ ಮೇಲೆ ಬಿಳಿ ಕುರ್ತಾ ಧರಿಸಿದ್ದರು. ಅವರ ತಲೆಕೂದಲುಗಳನ್ನು ಹೆಗಲವರೆಗೆ ಕತ್ತರಿಸಲಾಗಿತ್ತು. ಅಂಗೈಯಲ್ಲಿ ಸುಂದರ ಡಿಸೈನಿನ ಟ್ಯಾಟೂ ಹಾಕಿಸಿಕೊಂಡಿದ್ದರು. ಅವರು ಅರವತ್ತರ ವಯಸ್ಸಿನಲ್ಲೂ ಹಾಟ್ ಆಗಿ ಕಾಣಿಸುತ್ತಿದ್ದರು. ಲಾರ್ಸ್ ಜನಿಸಿದಾಗ ಅವರ ವಯಸ್ಸು ಇಪ್ಪತ್ತೈದಿರಬಹುದು. ಆಗ ಇವರ ಸೌಂದರ್ಯ ಇನ್ನೂ ಆಕರ್ಷಕವಾಗಿತ್ತೆಂದು